Karnatak Law Society's
**Vishwanathrao Deshpande Institute of Technology**
**(Approved by AICTE, New Delhi. Affiliated to VTU, Belagavi)**
**(Recognised Under Section 2(f) by UGC, New Delhi)**
**Udyog Vidya Nagar, Haliyal – 581329, Dist: Uttar Kannada (Karnataka)**
**Phone: 08284-220861, 220334, 221409, Fax: 08284-220813**
**www.klsvdit.edu.in principal@klsvdit.edu.in**

Date: 08-04-2022

**ಪತ್ರಿಕಾ ಪ್ರಕಟಣೆ:**

## ರಾಬರ್ಟ್ ಬಾಷ್ ಫೌಂಡೇಶನ್ ಕೈಗಾರಿಕಾ ತರಬೇತಿ

ಕರ್ನಾಟಕ ಲಾ ಸೊಸೈಟಿಯ ವಿಶ್ವನಾಥರಾವ್ ದೇಶಪಾಂಡೆ ತಾಂತ್ರಿಕ ಮಹಾವಿದ್ಯಾಲಯ ಹಳಿಯಾಳದ ಉದ್ಯೋಗ ಮತ್ತು ತರಬೇತಿ ವಿಭಾಗದ ಉಪನ್ಯಾಸಕರ ತಂಡ ಬೆಂಗಳೂರಿನ ರಾಬರ್ಟ್ ಬಾಷ್ ಪ್ರತಿಷ್ಠಾನದ ತಾಂತ್ರಿಕ ಕೌಶಲ್ಯಾಭಿವೃದ್ಧಿ ಕೇಂದ್ರಕ್ಕೆ ಭೇಟಿ ನೀಡಿ ನಾಲ್ಕು ದಿನಗಳ ಕಾಲ ಕೈಗಾರಿಕಾ ತರಬೇತಿ ಪಡೆದುಕೊಂಡಿದ್ದಾರೆ.

ಎಪ್ರೀಲ್ 4 ರಿಂದ 7 ರ ತನಕ ನಡೆದ ಈ ತರಬೇತಿಯಲ್ಲಿ ಬಾಷ್ ಪ್ರತಿಷ್ಠಾನದ ರಾಷ್ಟ್ರೀಯ ವ್ಯವಸ್ಥಾಪಕರುಗಳಾದ ಶ್ರೀ. ಸಿತೇಶ ಭಾತಿ, ಶ್ರೀ ಗಣೇಶ ಅವಟಿ, ಮುಖ್ಯಸ್ಥರಾದ ಡಾ. ಓ. ಪಿ ಗೋಯಲ್ ಅವರು ಭಾಗವಹಿಸಿ ಐ.ಓ.ಟಿ, ಸಂಯೋಜಕ ಉತ್ಪಾದನೆ ಮತ್ತು ಕೈಗಾರಿಕೆ 4.0 ನಂತಹ ಆಧುನಿಕ ವಿಷಗಳ ಕುರಿತು ಮಾಹಿತಿ ನೀಡಿದರು. ಈ ಕೇಂದ್ರವು ಹೊಂದಿರುವ ರೊಬೋಟಿಕ್ಸ್, ಆರ್ಡಿನೋ, 3ಡಿ ಮುದ್ರಣ ಮತ್ತು ಪ್ರೋಗ್ರಾಮೆಬಲ್ ನಿಯಂತ್ರಕಗಳ ಕುರಿತು ಈ ಸಂದರ್ಭದಲ್ಲಿ ಪ್ರಾಯೋಗಿಕ ತರಬೇತಿ ನೀಡಲಾಯಿತು. ಈ ಮಾಹಿತಿಯನ್ನು ಆಧರಿಸಿ ಮಹಾವಿದ್ಯಾಲಯದ ವಿದ್ಯಾರ್ಥಿಗಳಿಗೆ ಪ್ರಸಕ್ತ ತಂತ್ರಜ್ಞಾನದ ಕುರಿತು ತರಬೇತಿ ನೀಡಲಾಗುವುದು.

ಮಹಾವಿದ್ಯಾಲಯದ ಉದ್ಯೋಗ ಮತ್ತು ತರಬೇತಿ ಘಟಕದ ಸಂಚಾಲಕರಾದ ಪ್ರೊ. ರಜತ್ ಆಚಾರ್ಯ, ಉಪನ್ಯಾಸಕರುಗಳಾದ ಪ್ರೊ. ಪ್ರಾಣೇಶ ಕುಲಕರ್ಣಿ, ಪ್ರೊ. ರವೀಂದ್ರ ಮೊಟೇಕರ್, ಪ್ರೊ. ರಾಘವೇಂದ್ರ ನಾಗ್ರಳ್ಳಿ, ಪ್ರೊ. ಗುರುನಾಥ ಮೇವುಂಡಿ ಮತ್ತು ಪ್ರೊ. ಸುನಿಲ್ ಪಾಟೀಲ್ ಈ ತರಬೇತಿಯಲ್ಲಿ ಭಾಗವಹಿಸಿದ್ದರು ಎಂದು ಪ್ರಾಂಶುಪಾಲರಾದ ಡಾ. ವಿ ಎ ಕುಲಕರ್ಣಿ ತಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಾಂಶುಪಾಲರು

Principal
KLS Vishwanathrao Deshpande
Institute of Technology, Haliyal


Bosch Vocational Center
Pursuit of excellence in skill development
BOSCH
Invented for life
CONFERENCE HALL